ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/Kittur K. Jamborette/1492/2026-27 ದಿನಾಂಕ:12.11.2026

ಜಿಲ್ಲಾ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, _____ ಜಿಲ್ಲೆ

ಮಾನ್ಯರೆ,

ವಿಷಯ:- ದಿನಾಂಕ: 27 ರಿಂದ 31 ಡಿಸೆಂಬರ್ 2026ರ ವರೆಗೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ, ಯಲ್ಲಾಪುರ, ಶಿರಸಿ ಜಿಲ್ಲೆಯಲ್ಲಿ **"ಬೆಳಗಾವಿ ವಿಭಾಗದ ಎರಡನೇ ಜಾಂಬೂರೇಟ್"**-2026ಗೆ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕರುಗಳನ್ನು ನಿಯೋಜಿಸುವ ಬಗ್ಗೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಮತ್ತು ಶಿರಸಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಕಿತ್ತೂರು ಕರ್ನಾಟಕ (ಬೆಳಗಾವಿ ವಿಭಾಗದ) ಜಿಲ್ಲೆಗಳಾದ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ವಿಜಯಪುರ, ಬಾಗಲಕೋಟೆ, ಕಾರವಾರ ಮತ್ತು ಶಿರಸಿ, ಈ 08 ಜಿಲ್ಲೆಗಳ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳಿಗೆ **"ಬೆಳಗಾವಿ ವಿಭಾಗದ ಎರಡನೇ ಜಾಂಬೂರೇಟ್-2026"ಅನ್ನು ದಿನಾಂಕ: 27 ರಿಂದ 31 ಡಿಸೆಂಬರ್ 2026ರ ವರೆಗೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ, ಯಲ್ಲಾಪುರ, ಶಿರಸಿ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ.**

ಜಾಂಬೂರೇಟ್‌ನಲ್ಲಿ 10 ರಿಂದ 17 ವರ್ಷ ವಯೋಮಿತಿಯುಳ್ಳ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಮತ್ತು 18 ರಿಂದ 25 ವರ್ಷ ವಯೋಮಿತಿಯುಳ್ಳ ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕ/ಶಿಕ್ಷಕಿಯರುಗಳು, ಉಪನ್ಯಾಸಕ/ಉಪನ್ಯಾಸಕಿಯರುಗಳು ಭಾಗವಹಿಸುತ್ತಾರೆ. ಈ ಬೆಳಗಾವಿ ವಿಭಾಗದ ಎರಡನೇ ಜಾಂಬೂರೇಟ್ ಏರ್ಪಡಿಸಿರುವ ಸ್ಥಳ, ದಿನಾಂಕ ಮತ್ತು ಚಟುವಟಿಕೆಗಳ ವಿವರಗಳು ಕೆಳಕಂಡಂತಿವೆ:

ಶಿಬಿರ	ಸ್ಕೌಟ್ಸ್-ಗೈಡ್ಸ್‌ಗಳಿಗೆ "ಬೆಳಗಾವಿ ವಿಭಾಗದ ಎರಡನೇ ಜಾಂಬೂರೇಟ್-2026"
ಸ್ಥಳ	ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ, ಯಲ್ಲಾಪುರ, ಶಿರಸಿ ಜಿಲ್ಲೆ
ಜಾಂಬೂರೇಟ್ ದಿನಾಂಕ	ದಿನಾಂಕ: 27.12.2026 ರಿಂದ 31.12.2026 ರವರೆಗೆ.
ವರದಿ ಮಾಡುವ ದಿನಾಂಕ:	ದಿನಾಂಕ: 27.12.2026 ರಂದು ಬೆಳಗ್ಗೆ 9.00 ಗಂಟೆಯೊಳಗೆ
ಬಿಡುಗಡೆ ಮಾಡುವ ದಿನಾಂಕ:	ದಿನಾಂಕ: 31.12.2026 ರಂದು ಸಂಜೆ 4.00 ಗಂಟೆಗೆ
ನೊಂದಾವಣಿ & ಶಿಬಿರ ಶುಲ್ಕ	ತಲಾ ರೂ.700/-ಗಳು ಪ್ರತಿ ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಮತ್ತು ದಳನಾಯಕರುಗಳಿಗೆ
ಪ್ರಯಾಣ ವೆಚ್ಚ	ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಮತ್ತು ಶಿಕ್ಷಕರು/ಉಪನ್ಯಾಸಕರುಗಳು ಸ್ವಂತ ಸ್ಥಳದಿಂದ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಆಯಾಯ ಶಾಲಾ/ಕಾಲೇಜು ಸ್ಕೌಟ್-ಗೈಡ್/ರೋವರ್-ರೇಂಜರ್ ನಿಧಿ ಅಥವಾ ಸಂಚಿತ ನಿಧಿಯಿಂದ ಭರಿಸಿಕೊಳ್ಳುವುದು.

8 ಜಿಲ್ಲೆಗೆ ನೀಡಿರುವ ಕೋಟಾ

ಜಿಲ್ಲೆ ಹೆಸರು	ಸ್ಕೌಟ್ಸ್ ಸಂಖ್ಯೆ	ಗೈಡ್ಸ್ ಸಂಖ್ಯೆ	ರೋವರ್ಸ್ ಸಂಖ್ಯೆ	ರೇಂಜರ್ಸ್ ಸಂಖ್ಯೆ	ಸ್ಕೌಟ್-ಗೈಡ್ ದಳನಾಯಕರು	ಒಟ್ಟು
ಬೆಳಗಾವಿ	50	50	05	05	10	120
ಧಾರವಾಡ	50	50	05	05	10	120
ಹಾವೇರಿ	50	50	05	05	10	120
ಗದಗ	50	50	05	05	10	120
ವಿಜಯಪುರ	50	50	05	05	10	120
ಬಾಗಲಕೋಟೆ	50	50	05	05	10	120
ಕಾರವಾರ	50	50	05	05	10	120
ಶಿರಸಿ	50	50	05	05	10	120
ಒಟ್ಟು	**400**	**400**	**40**	**40**	**80**	**960**

<table>
<tr><td></td><td></td></tr>
<tr><td>ಆತಿಥ್ಯದ ವ್ಯವಸ್ಥೆ</td><td>ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಮತ್ತು ಶಿರಸಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಊಟ & ವಸತಿಯ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ.</td></tr>
<tr><td>ಚಟುವಟಿಕೆಗಳು</td><td>ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಈ ಕೆಳಕಂಡಂತೆ ವಿವಿಧ ವಿನೂತನ ಚಟುವಟಿಕೆಗಳನ್ನು ಏರ್ಪಡಿಸಲಾಗಿರುವುದು.
<table>
<tr><td>•ಸಾಹಸಮಯ ಚಟುವಟಿಕೆಗಳು</td><td>•ಯೋಗ ಮತ್ತು ಜ್ಞಾನ</td></tr>
<tr><td>•ಬೌದ್ಧಿಕ ಆಧಾರಿತ ಚಟುವಟಿಕೆಗಳು</td><td>•ಏಕೀಕರಣ ಆಟಗಳು</td></tr>
<tr><td>•ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು</td><td>•ಎಸ್‌ಡಿಜಿ ಹಬ್</td></tr>
<tr><td>•ಸ್ಕೌಟ್ ಸ್ಕಿಲ್ಲೋ ಹಬ್</td><td>•ಹೊರಾಂಗಣ ಚಟುವಟಿಕೆಗಳು</td></tr>
<tr><td>•ಜಾನಪದ ನೃತ್ಯಗಳು</td><td>•ಯುವವೇದಿಕೆ</td></tr>
<tr><td>•ಟ್ರಕ್ಕಿಂಗ್ & ಹೈಕಿಂಗ್</td><td>•ಪಯೋನಲಿಂಗ್ ಪ್ರಾಜೆಕ್ಟ್</td></tr>
<tr><td>•ಜಿಲ್ಲಾವಾರು ಪೆಜೆಂಟ್ ಶೋ</td><td>•ಸಾಂಪ್ರದಾಯಿಕ ಉಡಿಗೆ ಪ್ರದರ್ಶನ</td></tr>
<tr><td>•ಸಮುದಾಯ ಸೇವೆ</td><td>•ಕ್ಯಾಂಪ್ ಕ್ರಾಫ್ಟ್</td></tr>
<tr><td>•ಕಲರ್ ಪಾರ್ಟಿ ಪಥಸಂಚಲನ</td><td>•ರಸಪ್ರಶ್ನೆ</td></tr>
<tr><td>•ನಗರ ಮೆರವಣಿಗೆ</td><td>•ಪ್ರವಾಸಿ ತಾಣಗಳ ಭೇಟಿ</td></tr>
<tr><td>•ಮೋಜಿನ ಆಟಗಳು</td><td>•ಇತರೆ ಚಟುವಟಿಕೆಗಳನ್ನು ಸಂಘಟಿಸಲಾಗುವುದು.</td></tr>
</table>
ಸೂಚನೆ: ತಮ್ಮ ತಮ್ಮ ಜಿಲ್ಲೆಯ ವಿಭಾಗವಾರು ಕಂಟಿಂನ್‌ಜೆಂಟ್ ನಾಯಕರನ್ನು ನೇಮಿಸಿ, ಅವರುಗಳ ಮುಖೇನಾ ಇಂದಿನಿಂದಲೇ ಪೂರ್ವ ಸಿದ್ಧತೆಯನ್ನು ನಡೆಸಿ, ಅತ್ಯುತ್ತಮ ಸಿದ್ಧತೆಯೊಂದಿಗೆ ಈ ಮೇಲಿನ ಕಾರ್ಯಕ್ರಮಗಳಿಗೆ/ಚಟುವಟಿಕೆಗಳಿಗೆ ಸಂಬಂಧಿಸಿದ ಕಚ್ಚಾ ವಸ್ತ್ರುಗಳು, ವೇಷ-ಭೂಷಣ, ಜಿಲ್ಲೆಗಳ ಬ್ಯಾನರ್, ಪ್ರದರ್ಶನಕ್ಕೆ ಇರುವ ಅಗತ್ಯ ಸಾಮಾಗ್ರಿಗಳನ್ನು ಪ್ರತ್ಯೇಕವಾಗಿ ಬಾಕ್ಸ್‌ಗಳಲ್ಲಿ ತರುವುದು. ಹೆಚ್ಚಿನ ಮಾಹಿತಿಗಳನ್ನು ಮುಂದಿನ ಸುತ್ತೋಲೆಯಲ್ಲಿ ತಿಳಿಸಲಾಗುವುದು.</td></tr>
<tr><td>ತರಬೇಕಾದ ಸಾಮಗ್ರಿಗಳು</td><td>1) ಎರಡು ಅಸೋಸಿಯೇಷನ್ ಧ್ವಜಗಳು (ಒಂದನ್ನು ಧ್ವಜಾರೋಹಣ ಮಾಡಲು ಇನ್ನೊಂದನ್ನು ಮಾರ್ಚ್ ಫಾಸ್ಟ್ ವೇಳೆಯಲ್ಲಿ ಉಪಯೋಗಿಸಲು).
2) 24“X 12” ಅಳತೆಯುಳ್ಳ ಮತ್ತು 12” ಹಿಡಿಕೆಯ 3 ಜಿಲ್ಲಾ ಹೆಸರುಗಳುಳ್ಳ ಬೋರ್ಡ್‌ಗಳು (ಬಿಳಿಯ ಬೋರ್ಡ್ ಮೇಲೆ ಕೆಂಪು ಅಕ್ಷರಗಳಲ್ಲಿ ಬರೆದಿರಬೇಕು)
3) ಕಲರ್ ಪಾರ್ಟಿ ಸಾಮಗ್ರಿಗಳು - ಎಪಿಆರ್‌ಓ ಪ್ರಕಾರ
4) ಚಟುವಟಿಕೆಗಳಿಗೆ ಹಾಗು ಜಿಲ್ಲಾ ಪ್ರದರ್ಶನ, ಪಯನಲಿಂಗ್ ಸಂಬಂಧಿಸಿದ ಸಾಮಗ್ರಿಗಳನ್ನು ತರುವುದು.
5) ಶಿಬಿರಾರ್ಥಿಗೆಬೇಕಾದ ಸಾಮಗ್ರಿಗಳನ್ನು ತಪ್ಪದೇ ತರುವುದು.
6) ಪ್ರಥಮ ಚಿಕಿತ್ಸೆ ಹಾಗೂ ಅದರಲ್ಲಿರಬೇಕಾದ ಅವಶ್ಯ ವಸ್ತುಗಳು
7) ಅಡುಗೆ ತಯಾರಿಕೆಗೆ ಬೇಕಾದ ವಸ್ತುಗಳು.
8) ಗ್ಯಾಡ್ಜೆಟ್‌ಗಳಿಗಾಗಿ ಕೋಲು, ಹಗ್ಗ, ಬಂಬೂ, ಇತರೆ</td></tr>
<tr><td>ವೈಯಕ್ತಿಕ ಕಿಟ್</td><td>ಎರಡು ಜೊತೆ ಯೂನಿಫಾರಂ, ಬೆಡ್‌ಷೀಟ್‌ಗಳು, ನೀರಿನ ಬಾಟಲ್, ಟಾರ್ಚ್, ಕಾಂಪಾಸ್, ಬದಲಾಯಿಸಲು ಉಡುಪು, ತಟ್ಟೆ, ಲೋಟ, ಚಮಚ ಹಾಗೂ ಇತರೆ ಅವಶ್ಯ ವಸ್ತುಗಳು, ವೈಯಕ್ತಿಕ ಔಷಧಿಗಳು.</td></tr>
<tr><td>ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವುದು</td><td>1. ಶ್ರೀ. ವಿ.ಹೆಚ್. ಭಟ್ಕಳ್, ಜಿಲ್ಲಾ ಮುಖ್ಯ ಆಯುಕ್ತರು, ಶಿರಸಿ - 9880071443
2. ಶ್ರೀ.ವೀರಪ್ಪ ಮಾದರ್, ಎಎಸ್‌ಒಸಿ, ಶಿರಸಿ - 9008383618
3. ಶ್ರೀಮತಿ ಮಂಜುಳ. ಸಿ, ರಾಜ್ಯ ಸಂಘಟನಾ ಆಯುಕ್ತರು(ಗೈ)- 9482433516/ 9844366941
4. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು(ಗೈ)- 9448914540</td></tr>
</table>

ಆದ್ದರಿಂದ ತಾವು, ತಮ್ಮ ಜಿಲ್ಲೆಗೆ ನೀಡಿರುವ ಕೋಟಾದನ್ವಯ **"ಬೆಳಗಾವಿ ವಿಭಾಗದ ಎರಡನೇ ಜಾಂಬೂರೇಟ್-2026"**ನಲ್ಲಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕರುಗಳನ್ನು ಭಾಗವಹಿಸಲು ನಿಯೋಜಿಸಲು ಕೋರಲಾಗಿದೆ. ಭಾಗವಹಿಸುವ ಸ್ಕೌಟ್ಸ್, ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕರುಗಳು ನೊಂದಾವಣಿ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು ಆಯಾಯ ಶಾಲಾ ಸ್ಕೌಟ್-ಗೈಡ್/ ಕಾಲೇಜು ರೋವರ್-ರೇಂಜರ್ ನಿಧಿ ಅಥವಾ ಸಂಚಿತ ನಿಧಿಯಿಂದ ಭರಿಸಿಕೊಳ್ಳಲು ತಿಳಿಸಲಾಗಿದೆ.

ತಮ್ಮ ಜಿಲ್ಲೆಯಲ್ಲಿ ಭಾಗವಹಿಸುವ ಸ್ಕೌಟ್ಸ್, ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ದಳನಾಯಕರುಗಳ ಹೆಸರು ಮತ್ತು ಇತರೆ ವಿವರಗಳನ್ನು ಎಕ್ಸೆಲ್ ಶೀಟ್‌ನಲ್ಲಿ ಭರ್ತಿ ಮಾಡಿಸಿಕೊಂಡು, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಮತ್ತು ಸ್ಕೌಟರ್ಸ್, ಗೈಡರ್ಸ್‌ಗಳಿಗೆ **ತಲಾ ರೂ.700/-ಗಳಂತೆ** ನೊಂದಾವಣಿ & ಶಿಬಿರ ಶುಲ್ಕವನ್ನು ದಿನಾಂಕ: 15-12-2026ರ ಒಳಗಾಗಿ ತಮ್ಮ ಜಿಲ್ಲಾ ಸಂಸ್ಥೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು.

ಈ ಜಾಂಬೂರೇಟ್‌ನಲ್ಲಿ ಭಾಗವಹಿಸುವವರಿಂದ ಸಂಗ್ರಹವಾದ ಒಟ್ಟು ಶುಲ್ಕವನ್ನು ರಾಜ್ಯ ಸಂಸ್ಥೆಯು ಮುಂದೆ ತಿಳಿಸುವ ಖಾತೆಗೆ ಜಮೆ ಮಾಡಲು ಮತ್ತು ಭಾಗವಹಿಸುವವರ ವಿವರಗಳ ಎಕ್ಸೆಲ್‌ಶೀಟ್ ಪಟ್ಟಿಯನ್ನು ರಾಜ್ಯ ಸಂಸ್ಥೆಗೆ ಕಳುಹಿಸುವುದು. ಜಾಂಬೂರೇಟ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳನ್ನು ಮುಂದಿನ ಸುತ್ತೋಲೆಯಲ್ಲಿ ತಿಳಿಸಲಾಗುವುದು.

ಸ್ಕೌಟ್ / ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:

1. ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಸಂಸ್ಥೆ, ಶಿರಸಿ ಜಿಲ್ಲೆ
2. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, _____ ಜಿಲ್ಲೆ
3. ಜಿಲ್ಲಾ ಆಯುಕ್ತರು(ಸ್ಕೌಟ್/ಗೈಡ್), ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, _____ ಜಿಲ್ಲೆ
4. ಸ್ಥಳೀಯ ಕಾರ್ಯದರ್ಶಿ, ಭಾ.ಸ್ಕೌ.ಗೈ, _____ ಜಿಲ್ಲೆ
5. ಎಎಸ್‌ಒಸಿ/ಡಿಒ/ಎಸ್‌ಜಿವಿ/ಎಸ್‌ಜಿಎ/ಡಿಒಟಿ, ಭಾ.ಸ್ಕೌ.ಗೈ, _____ ಜಿಲ್ಲೆ